ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 186-189
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹೆಗ್ಗಡದೇವನಕೋಟೆ ತಾಲೂಕಿನ ಜೈನಬಸದಿಗಳು: ಒಂದು ಅಧ್ಯಯನ

**ಡಾ. ಉಮಾದೇವಿ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೋಕಾಕ್.

**Abstract:**

*ಮೈಸೂರು ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಹೆಗ್ಗಡದೇವನಕೋಟೆ ಕೂಡ ಒಂದಾಗಿದೆ. 1622, 40 ಚದರ ಕಿಲೋಮೀಟರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಈ ತಾಲೂಕಿನಲ್ಲಿ ಶೈವ, ವೈಷ್ಣವ ಮತ್ತು ಜೈನಧರ್ಮದ ದೇವಾಲಯಗಳು ಮತ್ತು ಬಸದಿಗಳು ಇವೆ. ಈ ತಾಲೂಕಿನಲ್ಲಿ ಜೈನಧರ್ಮವು ಪ್ರಾಚೀನ ಕಾಲದಿಂದಲೂ ಇದೆ. ಈ ಧರ್ಮ ಹಿಂದೂ ಧರ್ಮದಿಂದ ಭಿನ್ನವಾಗಿದ್ದು, ಬೌದ್ಧ ಧರ್ಮದಂತೆ ಒಂದು ಪ್ರಾಚೀನ ಸ್ವತಂತ್ರ ಧರ್ಮವಾಗಿದೆ. ಜೈನಧರ್ಮದ ಸ್ಥಾಪಕರು 24ನೆಯ ತೀರ್ಥಂಕರರಾದ ಶ್ರೀ ವರ್ಧಮಾನ ಮಹಾವೀರರು, ಇವರು ಕ್ರಿ.ಪೂ.659ರಲ್ಲಿ ಬಿಹಾರದ ವೈಶಾಲಿ ಪಟ್ಟಣದಲ್ಲಿ ಕ್ಷತ್ರಿಯ ರಾಜವಂಶದಲ್ಲಿ ಜನಿಸಿ ಜೀವನದಲ್ಲಿ ಜಿಗುಪ್ಸೆಯಾಗಿ ಸರ್ವತ್ಯಾಗ ಮಾಡಿ 14 ವರ್ಷಗಳು ಕಾಡಿನಲ್ಲಿ ತಪಸ್ಸು ಮಾಡಿ ಜೈನಧರ್ಮದ ತತ್ವಗಳನ್ನು ಜಗತ್ತಿಗೆ ಬೋಧಿಸಿದರು. ಇವರು ಬೋಧಿಸಿದ ಧರ್ಮ ಜೈನಧರ್ಮವಾಯಿತು. ಪ್ರಸ್ತುತ ಲೇಖನದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನಲ್ಲಿರುವ ಜೈನಬಸದಿಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಜೈನಧರ್ಮ, ಬಸದಿಗಳು, ದೇವಾಲಯಗಳು.*

## ಪೀಠಿಕೆ

ಜೈನಧರ್ಮ ವಿಶ್ವದ ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದಾಗಿದೆ. ಜೈನ ಮತ್ತು ಜೈನೇತರ ಗ್ರಂಥಗಳು, ಶಿಲಾಲೇಖನಗಳು, ಪ್ರಾಚ್ಯ ವಸ್ತುಗಳು, ಸ್ಮಾರಕಗಳು, ಮೊಹೆಂಜೊದಾರೊ, ಹರಪ್ಪ–ಈ ಪ್ರಾಚೀನ ನಗರಗಳ ಅವಶೇಷಗಳಲ್ಲಿ ದೊರೆತ ಪ್ರತಿಮೆಗಳು ಮತ್ತು ಅವುಗಳ ಪೀಠದಲ್ಲಿ ಕೆತ್ತಿರುವ ಶಾಸನಗಳು ಇವೆಲ್ಲವೂ ಜೈನಧರ್ಮದ ಪ್ರಾಚೀನತೆಯನ್ನು ತಿಳಿಸುತ್ತವೆ. ಜೈನರಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪಂಥಗಳಿವೆ. ಅಲ್ಲದೆ ಯಾಪನೀಯ ಎಂಬ ಪಂಥ ಸಹ ಇದೆ. ಸಂಸಾರಿಯನ್ನು ಶ್ವೇತಾಂಬರರೆಂದು ನಂಬಿದರೆ, ಮಹಾವೀರ ವರ್ಧಮಾನರು ಅಜನ್ಮ ಬ್ರಹ್ಮಚಾರಿಗಳಾಗಿದ್ದರೆಂದು ದಿಗಂಬರರು ನಂಬಿರುತ್ತಾರೆ. ಹೀಗೆ ಪ್ರಾರಂಭವಾದ ಜೈನಧರ್ಮ ಪ್ರಾಚೀನ ಕಾಲದಿಂದಲೂ ಕೂಡ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದೆ ಎಂಬುದು ತಿಳಿದು ಬರುತ್ತದೆ.

ಶ್ರವಣಬೆಳಗೊಳದ ಶಾಸನದ ಉಲ್ಲೇಖದ ಪ್ರಕಾರ ಭದ್ರಬಾಹು ಸ್ವಾಮಿಗಳು ಉತ್ತರ ಭಾರತದಲ್ಲಿ 12 ವರ್ಷಗಳ ಕಾಲ ಕ್ಷಾಮ ಬರುವುದೆಂದು ತಮ್ಮ ದಿವ್ಯಜ್ಞಾನದಿಂದ ತಿಳಿದು ಇಡೀ ಜೈನ ಸಂಘದೊಂದಿಗೆ ದಕ್ಷಿಣಕ್ಕೆ ಹೊರಟು ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದಲ್ಲಿ ಶಿಷ್ಯರೊಂದಿಗೆ ನೆಲೆಸಿದರು. ಭದ್ರಬಾಹು ಸ್ವಾಮಿಗಳ ಶಿಷ್ಯರಲ್ಲೊಬ್ಬರಾದ ಚಂದ್ರಗುಪ್ತ ಮೌರ್ಯನು ಸಲ್ಲೇಖವ ವ್ರತದಿಂದ ಸಮಾದಿ

**Please cite this article as:** ಉಮಾದೇವಿ. (2023). ಹೆಗ್ಗಡದೇವನಕೋಟೆ ತಾಲ್ಲೂಕಿನ ಜೈನಬಸದಿಗಳು: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 186–189.

ಹೊಂದಿದರು ಎಂಬುದು ಐತಿಹಾಸಿಕ ದಾಖಲೆಗಳಿಂದ ತಿಳಿದು ಬಂದಿದೆ.

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಅನೇಕ ರಾಜ ವಂಶಸ್ಥರ ಧರ್ಮ ಸಹಿಷ್ಣುತಾ ನೀತಿಯ ಫಲವಾಗಿ ದೊರೆತ ಅಪಾರ ಪ್ರೋತ್ಸಾಹದಿಂದ ಜೈನಧರ್ಮ ಪುರೋಭಿವೃದ್ಧಿಯಾಗಿ ಕರ್ನಾಟಕದಲ್ಲಿ ಇಂದಿಗೂ ಅಸ್ತಿತ್ವದಲ್ಲಿದೆ. ಇದೇ ಮಾದರಿಯಲ್ಲಿ ಹೆಗ್ಗಡದೇವನಕೋಟೆ ತಾಲೂಕಿನ ಪ್ರದೇಶದಲ್ಲಿಯೂ ಇದೆ. ಜೈರ್ನಧರ್ಮದಲ್ಲಿ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ್ಯ ಎಂಬ ತ್ರಿರತ್ನಗಳಿದ್ದು, ಇವು ಮೋಕ್ಷಮಾರ್ಗದ ಮೂರು ಮೆಟ್ಟಿಲುಗಳಾಗಿವೆ. ವಿಶ್ವದ ಧರ್ಮಗಳಲ್ಲಿ ಅಹಿಂಸೆಯನ್ನು ಪ್ರತಿಪಾದಿಸಿ ಅಹಿಂಸೆಗೆ ಅತ್ಯುನ್ನತ ಸ್ಥಾನವಿತ್ತ ಮೇರು ಧರ್ಮ ಜೈನಧರ್ಮ 'ಅಹಿಂಸಾ ಪರಮೋಧರ್ಮಃ' ಜೈನಧರ್ಮಕ್ಕನುಸಾರವಾಗಿ ಇದೆ. ಅಹಿಂಸೆ ಎಂದರೆ ಕೊಲ್ಲದೆ ಇರುವುದು ಮಾತ್ರವಲ್ಲ, ಇತರರಿಗೆ ತಾನು ನೋವನ್ನುಂಟು ಮಾಡದಿರುವುದು, ಇತರರಿಂದ ಮಾಡಿಸದಿರುವುದು ಹಾಗೂ ಇತರರು ಮಾಡಿದ್ದನ್ನು ಅನುಮೋದಿಸದೇ ಇರುವುದು ಅಹಿಂಸೆ ಎನಿಸುತ್ತದೆ.

ಕರ್ನಾಟದವನ್ನಾಳಿದ ತಲಕಾಡಿನ ಗಂಗರು ಜೈನಧರ್ಮದ ಬೆಳವಣಿಗೆಗೆ ತಮ್ಮದೇಯಾದ ಕೊಡುಗೆಯನ್ನು ನೀಡಿದ್ದಾರೆ. ಸುಮಾರು ನಾಲ್ಕನೇ ಶತಮಾನದಿಂದ ಕ್ರಿ.ಶ ಹತ್ತನೇ ಶತಮಾನದ ವರೆಗೂ ಜೈನಬಸದಿಗಳ ನಿರ್ಮಾಣ ಮತ್ತು ನಿರ್ವಹಣೆಗೆ ದಾನದತ್ತಿಗಳನ್ನು ನೀಡಿದ್ದಾನೆ. ತಲಕಾಡಿನ ಗಂಗವಂಶದ ಕೊನೆಯ ಮೂರು ಅರಸರುಗಳ ಕಾಲದಲ್ಲಿ ಚಾವುಂಡರಾಯ ಮಂತ್ರಿಯಾಗಿದ್ದನು. ಹಾಗೂ ಇವನು ವ್ಯಾಕರಣ, ತರ್ಕ, ಗಣಿತ ವಿಷಯದಲ್ಲಿ ಹೆಚ್ಚಿನ ಜ್ಞಾನವನ್ನು ಹೊಂದಿದ್ದನು. ಇವರಲ್ಲದೆ ವಿಜಯಕೀರ್ತಿ, ಅಜಿತ ಸೇನಾಚಾರ್ಯ, ವಿಮಲ ಚಂದ್ರ, ಗುಣಧರ್ಮ, ವಜ್ರನಂದಿ ಇನ್ನೂ ಮೊದಲಾದ ಜೈನ ಕವಿಗಳು ತಲಕಾಡಿನ ಗಂಗರ ಆಸ್ಥಾನದಲ್ಲಿದ್ದರು.

ಹಿಂದೆ ಹೆಗ್ಗಡದೇವನಕೋಟೆ ತಾಲೂಕಿನ ಮಳಲಿ, ಮಗ್ಗೆ, ಸರಗೂರು ಮುಂತಾದ ಪ್ರದೇಶಗಳು ಜೈನಕೇಂದ್ರಗಳಾಗಿದ್ದವು. ವಿವಿಧ ಸಂದರ್ಭದಲ್ಲಿ ತಾಲೂಕಿನ ವಿವಿಧ ಕಟ್ಟಡಗಳ ನಿರ್ಮಾಣ ಸಂದರ್ಭಲ್ಲಿ ಜೈನಶಿಲ್ಪಗಳು, ಜೈನ ಬಸದಿಗಳ ಅವಶೇಷಗಳು ದೊರೆತಿವೆ. ಉದಾ ವರ್ಧಮಾನ ತೀರ್ಥಂಕರರ ಬೆರಳು ಮುರಿದಿರುವ ಮೂರ್ತಿ ಶಿಲ್ಪ ದೊರೆತಿದೆ.

ಹೆಗ್ಗಡದೇವನ ಕೋಟೆಯ ಜೋನಿಗೇರಿ ಹಿಂದೆ ಜೈನರು ವಾಸಿಸುತ್ತಿದ್ದ ಪ್ರದೇಶವಾಗಿತ್ತು. ಆಗಿದೆ. ಜೈನರ ತಲಕಾಡಿನ ಗಂಗರ ನಂತರ ಬಂದಂತಹ ರಾಜ ಮಹಾರಾಜರುಗಳು ಜೈನ ಧರ್ಮಕ್ಕೆ ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ. ಮೊದಲಿಗೆ ಉತ್ತರ ಭಾರತದಲ್ಲಿ ಜನ್ಮತಳೆದ ಜೈನಧರ್ಮ ಕರ್ನಾಟಕದಲ್ಲೂ ಅದರಲ್ಲೂ ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಪಸರಿಸಿ ಇಲ್ಲಿಯ ರಾಜ ಮಹಾರಾಜರುಗಳು ಕೂಡ ಧರ್ಮ ಸಹಿಷ್ಣುತೆಯ ಪರಿಣಾಮವಾಗಿ ನಿರ್ಮಾಣವಾದ ಧಾರ್ಮಿಕ ಸಾಮರಸ್ಯತೆಯಿಂದ ಜನಸಾಮಾನ್ಯರು ಜೈನಧರ್ಮದ ಶ್ರೇಯೋಭಿವೃದ್ಧಿಗೆ ತನು, ಮನ, ಧನ ಪೂರ್ವಕವಾಗಿ ಸಹಾಯ ನೀಡಿ ಪ್ರೋತ್ಸಾಹಿಸಿರುವುದಕ್ಕೆ ಆಧಾರಗಳಿವೆ. ಅಷ್ಟೇ ಅಲ್ಲ ಅನೇಕ ಜೈನ ಸನ್ಯಾಸಿನಿಯರು ಅಥವಾ ಕಂತಿಯರು, ಯತಿಯರು ಕಲೆ, ಸಾಹಿತ್ಯ ವಾಸ್ತುಶಿಲ್ಪಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುವುದು ತಿಳಿದುಬರುತ್ತದೆ.

ಮೈಸೂರು ಭಾಗದ ಜೈನ ಬಸದಿಗಳ ನಿರ್ಮಾಣದ ಮೇಲೆ ದ್ರಾವಿಡ ವಾಸ್ತುಶಿಲ್ಪ ಪರಂಪರೆ ಪ್ರಭಾವ ಬೀರಿದೆ. ಜೈನಧರ್ಮದ ಬೆಳವಣಿಗೆಯ ಬಗ್ಗೆ ವಿವರಣಾತ್ಮಕವಾದ ಹಾಗೂ ಸಮಗ್ರವಾದ ಅಧ್ಯಯನ ನಡೆದಿಲ್ಲ. ಹೆಗ್ಗಡದೇವನಕೋಟೆ ತಾಲೂಕು ವ್ಯಾಪ್ತಿಯ ಸರಗೂರು[1], ಬಿಡಾಗಲು, ಚಕ್ಕೂರು, ಚಾಮಲಾಪುರ, ಕಳಸೂರುಗಳಲ್ಲಿ ಜೈನಬಸದಿಗಳನ್ನು ಕಾಣಬಹುದಾಗಿದೆ.

[1] ಸರಗೂರು ಪ್ರಸ್ತುತ ಪ್ರತ್ಯೇಕ ತಾಲೂಕು ಕೇಂದ್ರವಾಗಿದೆ.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಹಲವಾರು ಜೈನ ಬಸದಿಗಳಿವೆ. ಅವುಗಳಲ್ಲಿ ಶ್ರೀ ಚಂದ್ರಪ್ರಭಸ್ವಾಮಿ ಬಸದಿ. 1008 ಅನಂತನಾಥ ಬಸದಿ, 1008 ಚಂದ್ರನಾಥಸ್ವಾಮಿ ದಿಗಂಬರ ಜೈನಬಸದಿ, ಪಾರ್ಶ್ವನಾಥ ಬಸದಿ ಪ್ರಮುಖವಾದವುಗಳಾಗಿವೆ.

**ಶ್ರೀ ಚಂದ್ರ ಪ್ರಭುಸ್ವಾಮಿ ಬಸದಿ**

ಹೆಚ್.ಡಿ.ಕೋಟೆ ತಾಲೂಕಿನ ಚಕ್ಕೂರು ಎಂಬ ಗ್ರಾಮದಲ್ಲಿ ಈ ಜೈನ ಬಸದಿಯಿದೆ. ಉತ್ತರಾಭಿಮುಖವಾಗಿರುವ ಶ್ರೀ ಚಂದ್ರ ಪ್ರಭುಸ್ವಾಮಿ ಬಸದಿಯಿದೆ. ಈ ಬಸದಿಯ ಸುತ್ತಲೂ ಪ್ರಾಕಾರವನ್ನು ನಿರ್ಮಿಸಲಾಗಿದೆ. ಬಸದಿಯ ಗರ್ಭಗುಡಿಯಲ್ಲಿ ಚಂದ್ರಪ್ರಭುಸ್ವಾಮಿ ಶಿಲ್ಪ ಹಾಗೂ ಜಿನ ಶಿಲ್ಪಗಳಿವೆ. ಪ್ರಾಕಾರಕ್ಕೆ ಹೊಂದಿಕೊಂಡಂತೆ ನಿಷಧಿ ಶಾಸನದ ಕಲ್ಲಿನ ಮೇಲೆ 24 ತೀರ್ಥಂಕರರ ಕೆತ್ತನೆಯನ್ನು ಮಾಡಲಾಗಿದೆ. ಬಸದಿಯ ಮುಂದೆ ಒಂದು ಮಾನಸ್ತಂಭವನ್ನು ನಿಲ್ಲಿಸಲಾಗಿದೆ. ಈ ಮಾನಸ್ತಂಭವು ಸುಮಾರು 30 ಅಡಿ ಎತ್ತರವನ್ನು ಹೊಂದಿದ್ದು, ಪೀಠದ ಬುಡದಲ್ಲಿ ತೀರ್ಥಂಕರರ ಉಬ್ಬುಕೆತ್ತನೆ ಇದೆ. ಮಾನಸ್ತಂಭಗಳು ಜೈನವಾಸ್ತುಶಿಲ್ಪದ ಒಂದು ವಿಶಿಷ್ಟ ಕೊಡುಗೆಯಾಗಿದೆ. ಬಸದಿಗಳನ್ನು ಸಮವರಣಸಭೆ ಎಂದು ಪರಿಗಣಿಸಿ ಅದರ ಮುಂದೆ ಮಾನಸ್ತಂಭವನ್ನು ಸ್ಥಾಪಿಸುತ್ತಿದ್ದರು. ಉದಾಹರಣೆಗೆ ಶ್ರವಣಬೆಳಗೊಳದಲ್ಲಿ ಇಂತಹ ಉನ್ನತವಾದ ಮಾನಸ್ತಂಭಾಗಳನ್ನು ಚಿಕ್ಕಬೆಟ್ಟದ (ಚಂದ್ರಗಿರಿಯ) ಪಾರ್ಶ್ವನಾಥ ಬಸದಿಯ ಎದುರಿನಲ್ಲಿ ಮತ್ತು ದೊಡ್ಡಬೆಟ್ಟದ (ಇಂದ್ರಗಿರಿ) ಚಂದಣ್ಣನ ಬಸದಿಯ ಎದುರಿನಲ್ಲಿ ಕಾಣಬಹುದು.[2]

**1008 ಅನಂತನಾಥಬಸದಿ**

1008ನೇ ಅನಂತನಾಥಬಸದಿಯು ದ್ರಾವಿಡ ಶೈಲಿಯಲ್ಲಿದೆ. ಈ ಬಸದಿಯು ಸರಗೂರಿನಲ್ಲಿದ್ದು ಜೀರ್ಣೋದ್ಧಾರ ಮಾಡಲಾಗಿದೆ. ಮೂಲಗರ್ಭಗುಡಿಯಲ್ಲಿ ಹಲವಾರು ಜೈನರ ಕಂಚು ಶಿಲ್ಪಗಳು, ಜ್ವಾಲಾಮಾಲಿನಿ, ಯಕ್ಷ-ಯಕ್ಷಿಯರ ಶಿಲ್ಪಗಳಿವೆ. ಜೀರ್ಣೋದ್ಧಾರವಾಗಿರುವುದರಿಂದ ಯಾವುದೇ ತರಹದ ಹಳೆಯ ವಾಸ್ತುಶಿಲ್ಪಗಳು ಕಾಣಬರುವುದಿಲ್ಲ. ಬಸದಿಯ ಮುಂದೆ ಮಾನಸ್ತಂಭ ಇದೆ. ಇದರ ಮುಂದೆ ದ್ವಾರಮಂಟಪ ಇದೆ. ದ್ವಾರದ ಪ್ರಾಕಾರಗೋಡೆಯ ಮೇಲ್ಭಾಗದಲ್ಲಿ ಕೋಷ್ಠಗಳಿವೆ. ಸ್ಥಳೀಯರ ಪ್ರಕಾರ ಇದೊಂದು ಪ್ರಾಚೀನ ಕಾಲದ ಬಸದಿ ಎನ್ನುತ್ತಾರೆ.[3] ಅಲ್ಲದೆ ವಿಜಯನಗರ ಅರಸರ ಕಾಲಕ್ಕೆ ಕ್ರಿ.ಶ.1423 ರ ಆಳ್ವಿಕೆಯ ಮೂರನೇ ಬುಕ್ಕರಾಯನ ಶಾಸನ ಇದೆ.[4] ಇದು ಧಾರ್ಮಿಕ ವಿಚಾರಕ್ಕೆ ಪೂರಕವಾಗಿದೆ. ಅಲ್ಲದೆ ಈ ದೇವರ ಪೂಜೆಗಾಗಿ ಬಯಲುನಾಡಿನ ಒಳಗಿನ ತೋಟಹಳ್ಳಿಯ ಗ್ರಾಮ, ಕೆರೆಗದ್ದೆ, ಬೆದ್ದಲು, ತೋಟ ನೀಡಿರುವುದಾಗಿ ತಿಳಿದುಬರುತ್ತದೆ. ಇದೊಂದು ದಾನ ನೀಡಿರುವ ಶಾಸನವಾಗಿದೆ.

**ಶ್ರೀ ಶಾಂತಿನಾಥ ಬಸದಿ**

ಸರಗೂರಿನ ಬಿಡಗಲು ಗ್ರಾಮದಲ್ಲಿ ಪೂರ್ವಾಭಿಮುಖವಾಗಿ ಈ ಬಸದಿಯಿದೆ. ಈ ಬಸದಿಗೆ ಶಾಸನಾಧಾರಗಳಿಲ್ಲ. ಶ್ರೀ ಶಾಂತಿನಾಥ ಬಸದಿಯು ಗರ್ಭಗುಡಿ ಮತ್ತು ನವರಂಗವನ್ನು ಹೊಂದಿದೆ. ಇದು ಜೀರ್ಣೋದ್ಧಾರವಾಗಿದೆ. ಅನೇಕ ಜೈನ ಮೂರ್ತಿಗಳ ಕಂಚುಶಿಲ್ಪಗಳಿವೆ.

**1008 ಚಂದ್ರನಾಥಸ್ವಾಮಿ ದಿಗಂಬರ ಜೈನಬಸದಿ**

ಈ ಬಸದಿಯು ಹೆಚ್.ಡಿ.ಕೋಟೆ ತಾಲೂಕಿನ ಚಾಮಲಾಪುರ ಎಂಬ ಗ್ರಾಮದಲ್ಲಿ ಕಂಡು ಬರತ್ತದೆ. ಈ ಬಸದಿಯೂ ಕೂಡ ಪುರಾತನ ಕಾಲಕ್ಕೆ ಸೇರಿದೆ. ಆದರೆ ಯಾವುದೇ ಶಾಸನಾಧಾರಗಳು ಈ ಬಸದಿಗೆ ದೊರೆತಿಲ್ಲ. ಈ ಬಸದಿಯು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿಯಲ್ಲಿ ಅನೇಕ ಜಿನ ಶಿಲ್ಪಗಳಿವೆ. ಈ ಶಿಲ್ಪಗಳು ಕಂಚಿನದವುಗಳಾಗಿವೆ.

---

[2] ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು, ಪು.ಸಂ.94.

[3] ಇಂದೇಶ್ ಎನ್. (2019). ಹೆಗ್ಗಡದೇವನಕೋಟೆ ಪ್ರದೇಶದ ಶಾಸನಗಳು ಮತ್ತು ಸ್ಮಾರಕಗಳು – ಒಂದು ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. 4ನೇ ಶತಮಾನದಿಂದ 19ನೇ ಶತಮಾನದವರೆಗೆ). ಅಪ್ರಕಟಿನ ಪೌಢಪ್ರಬಂಧ, ಮೈಸೂರು ವಿವಿ.

[4] ಎಫಿಗ್ರಾಫಿಯ ಕರ್ನಾಟಿಕ ಸಂಪುಟ-3, ಹೆಗ್ಗಡದೇವನಕೋಟೆ ತಾಲ್ಲೂಕು ಶಾಸನ ಸಂಖ್ಯೆ -91. ಪು.ಸಂ. 499-500.

ನವರಂಗದ ದಕ್ಷಿಣ ದಿಕ್ಕಿನ ಕೋಷ್ಠಗುಡಿಯಲ್ಲಿ ಪದ್ಮಾವತಿ, ಉತ್ತರ ದಿಕ್ಕಿನ ಕೋಷ್ಠಗುಡಿಯಲ್ಲಿ ಜ್ವಾಲಾಮಾಲಿನಿ ಶಿಲ್ಪಗಳಿದೆ. ಶಾಂತಿನಾಥ ಬಸದಿ ಹಾಗೂ ಪಾರ್ಶ್ವನಾಥ ಸಮೇತ ಕನ್ನಡಿ ಪದ್ಮಾವತಿ ಬಸದಿಗಳಿವೆ. ಇವೆರಡೂ ಬಸದಿಗಳು ಕೆಳಸೂರು ಗ್ರಾಮದಲ್ಲಿವೆ. ಈ ಊರನ್ನು ಶಾಂತಿನಗರ ಎಂದೂ ಸಹ ಕರೆಯುತ್ತಾರೆ. ಸ್ಥಳೀಯರ ಪ್ರಕಾರ ಮಳಲಿಯಿಂದ ಶಿಲ್ಪಗಳನ್ನು ತೆಗೆದುಕೊಂಡು ಬಂದು ಇಲ್ಲಿ ಬಸದಿಯನ್ನು ನಿರ್ಮಿಸಿದ್ದಾರೆಂದು ಹೇಳಿಕೆಗಳಿವೆ. ಕನ್ನಡಿ ಪದ್ಮಾವತಿ ಬಸದಿಯಲ್ಲಿ ಬ್ರಹ್ಮದೇವರು, ಪದ್ಮಾವತಿ, ಸರ್ಪ, ಲಿಂಗಗಳು ಸಹ ಇವೆ. ಆದಕಾರಣ ಇದು ವಿಶೇಷತೆಯನ್ನು ಹೊಂದಿದೆ.

**ಪಾರ್ಶ್ವನಾಥ ಬಸದಿ**

ಹೆಚ್.ಡಿ ಕೋಟೆ ತಾಲೂಕಿನ ಕಿತ್ತೂರು ಗ್ರಾಮದಲ್ಲಿ ಈ ಬಸದಿಯಿತ್ತು. ಪ್ರಸ್ತುತ ಈ ಬಸದಿಯು ಹಾಳಾಗಿದೆ. ಈ ಗ್ರಾಮವು ಕಬಿನಿ ನೀರಿನಲ್ಲಿ ಮುಳುಗಿರುವುದರಿಂದ ಇದನ್ನು ಖಚಿತವಾಗಿ ತಿಳಿಯಲು ಸಾಧ್ಯವಾಗಿಲ್ಲ. ಆದರೂ ಕೂಡ ಪಾರ್ಶ್ವನಾಥ ಬಸದಿಯ ಚೌರಿಗೆಯ ಪ್ರಕಾರ ಕ್ರಿ.ಶ. 19ನೇ ಶತಮಾನಕ್ಕೆ ಸೇರಿದ ಶಾಸನದಿಂದ ಬಸದಿಯ ಬಗ್ಗೆ ತಿಳಿದುಬರುತ್ತದೆ. ಕಿತ್ತೂರು ಗ್ರಾಮದ ಶ್ರೀ ಪಾರ್ಶ್ವನಾಥಸ್ವಾಮಿಯವರಿಗೆ ಅರಮನೆಯ ಲಕ್ಷ್ಮೀಪತಿ ಪಂಡಿತರ ಧರ್ಮಪತ್ನಿದಯ್ವರಾದ ಲಕ್ಷ್ಮಮ್ಮನವರ ಸೇವೆ ಎಂಬುದಾಗಿ ತಿಳಿದುಬರುತ್ತದೆ.[5] ಮತ್ತೊಂದು ಚೌರಿಗೆಯ ಮೇಲೆ ಕಿತ್ತೂರ ವಿಜಯ ಪಾರ್ಶ್ವನಾಥಸ್ವಾಮಿಗೆ ಬೆಳುಕೆರೆ ಶಾಂತಪಂಡಿತರ ಧರ್ಮ ಪತ್ನಿ ದೇವಮ್ಮನ ಸೇವೆ ಎಂಬುದಾಗಿ ತಿಳಿದುಬರುತ್ತದೆ.[6] ಇದೇ ಬಸದಿಯ ಮೂಲ ದೇವರಾದ ವಿಜಯ ಪಾರ್ಶ್ವನಾಥಸ್ವಾಮಿ ವಿಗ್ರಹದ ಪಾದದ ಕೆಳಗೆ ಕ್ರಿ.ಶ.12ನೇ ಶತಮಾನಕ್ಕೆ ಸೇರಿದ ಶಾಸನ ಇದೆ. ಆದಕಾರಣ ಈ ಬಸದಿಯು ಕ್ರಿ.ಶ.11–12ನೇ ಶತಮಾನದಲ್ಲಿ ನಿರ್ಮಾಣವಾಗಿರಬೇಕೆಂದು ತಿಳಿದುಬರುತ್ತದೆ.[7] ಈ ಎಲಾ ್ಲ ಬೆಳವಣಿಗೆಯನ್ನು ಗಮನಿಸಿದರೆ, ಕ್ರಿ.ಶ.11–12ನೇ ಶತಮಾನದ ಬಸದಿಗೆ ಕ್ರಿ.ಶ.19ನೇ ಶತಮಾನದವರೆಗೂ ಪೂಜೆಯಾಗಿರುವುದಕ್ಕೆ ನೀಡಿರುವ ಕೊಡುಗೆಗಳೇ ಕಾರಣವಾಗಿವೆ.

[5] ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಹೆಗ್ಗಡದೇವನಕೋಟೆ ತಾಲ್ಲೂಕು ಶಾಸನ ಸಂಖ್ಯೆ 127. ಪು.ಸಂ. 517

[6] ಅದೇ. ಶಾಸನ ಸಂಖ್ಯೆ 128

[7] ಅದೇ. ಶಾಸನ ಸಂಖ್ಯೆ 129

**ಪರಾಮರ್ಶನ/ಆಕರ ಗ್ರಂಥಗಳು**


- ಎಪಿಗ್ರಾಫಿಯ ಕರ್ನಾಟಿಕ–ಸಂಪುಟ 4
- ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 3
- ದೇವರಕೊಂಡಾರೆಡ್ಡಿ. (1994). ತಲಕಾಡಿನ ಗಂಗರ ದೇವಾಲಯಗಳು: ಒಂದು ಅಧ್ಯಯನ. ಕನ್ನಡ ಸಾಹಿತ್ಯ ಪರಿಷತ್ತು.
- ಇಂದೇಶ್ ಎನ್. (2019). ಹೆಗ್ಗಡದೇವನಕೋಟೆ ಪ್ರದೇಶದ ಶಾಸನಗಳು ಮತ್ತು ಸ್ಮಾರಕಗಳು – ಒಂದು ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. 4ನೇ ಶತಮಾನದಿಂದ 19ನೇ ಶತಮಾನದವರೆಗೆ). ಅಪ್ರಕಟಿತ ಪೌಢಪ್ರಬಂಧ, ಮೈಸೂರು ವಿವಿ.
- ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ಸ್, ಮೈಸೂರು ಸರ್ಕಾರ.
- ವಸಂತ ಲಕ್ಷ್ಮಿ. (2006). ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು, ಸುಮುಖ ಪ್ರಕಾಶನ